ಮಾಡಬೇಕಾಯ್ತು. ದೇಶದ ಪ್ರಧಾನಿ ಪಟ್ಟದಲ್ಲಿರೋರು ನಮ್ಮ ಜನರಿಗೆ "ಕಂಡಕಂಡಲ್ಲಿ ಕಕ್ಕಸು ಮಾಡಬೇಡ್ರಪಾ" ಅಂತ ರಾಷ್ಟ್ರಮಟ್ಟದ ಭಾಷಣದಲ್ಲಿ ವಿನಂತಿ ಮಾಡ್ಕೋಬೇಕಾಯ್ತು. ಕೆಂಪುಕೋಟೆ ಮೇಲಿಂದ ಘೋಷಣೆ ಮಾಡಬೇಕಾಯ್ತು.

ಮಗು: ಹೌದು, ಕೊಪ್ಪಳದಲ್ಲಿ ಅದ್ಯಾರೋ ಮಲ್ಲಮ್ಮ ಅನ್ನೋ ಹೆಣ್ಣು ಮಗಳು ಉಪವಾಸ ಸತ್ಯಾಗ್ರಹ ಮಾಡಿದಳಂತೆ – ಮನೇಲಿ ಕಕ್ಕಸು ಕಟ್ಟಿಸಬೇಕೂ ಅಂತ ಅಪ್ಪನಿಗೆ ಒತ್ತಾಯ ಮಾಡೋಕೆ. ಪ್ರಧಾನಿ ಮೋದಿಯವರು 'ಮನ್‌ಕೀ ಬಾತ್'ನಲ್ಲಿ ಅದನ್ನೇ ಹೇಳ್ತಾ ಇದ್ರಂತೆ ನಮ್ಮ ಟೀಚರ್ ಹೇಳಿದ್ರು.

ಅವನು: ಗಾಂಧೀಜಿ ಸ್ವಚ್ಛತೆ ಇರಬೇಕೂಂತ ಸತ್ಯಾಗ್ರಹ ಮಾಡಲಿಲ್ಲ. ಮಾಡೋಕೆ ಬಿಡುವೂ ಇರಲಿಲ್ಲ. ಆದರೆ, ಅವರು ಎಷ್ಟು ದೇಶಗಳಲ್ಲಿ ಎಷ್ಟು ಜನರಿಗೆ ಎಷ್ಟು ಮಕ್ಕಳಿಗೆ ಪ್ರೇರಣೆ ಕೊಟ್ರೂ ಗೊತ್ತಾ? ಆರು ವರ್ಷದ ಹಿಂದೆ, ಇಂಡೊನೇಷ್ಯದ ಬಾಲಿ ದ್ವೀಪದಲ್ಲಿ ಇಬ್ಬರು ಹೈಸ್ಕೂಲ್ ಹುಡುಗೀರು... ಅವರು ಬಾಪೂಜಿಯಿಂದ ಪ್ರೇರಣೆ ಪಡೆದು ಉಪವಾಸ ಸತ್ಯಾಗ್ರಹ ಮಾಡಿ ಇಡೀ ಬಾಲಿ ದ್ವೀಪದಲ್ಲಿ ಪ್ಲಾಸ್ಟಿಕ್ ಮಾಲಿನ್ಯ ಇಲ್ಲದ ಹಾಗೆ...

(ಅಷ್ಟರಲ್ಲಿ ಫ್ಯಾಕ್ಟರಿಯಲ್ಲಿ ಸಾಣೆ ಹಿಡಿಯುವ, ಕುಟ್ಟುವ, ಯಂತ್ರ ಓಡುವ ಸದ್ದು ಆರಂಭವಾಗಿ ಕ್ರಮೇಣ ಜೋರಾಗುತ್ತದೆ)

ಮಗು: (ಫ್ಯಾಕ್ಟರಿ ಸದ್ದನ್ನು ಮೀರಿಸುವ ಏರು ಧ್ವನಿಯಲ್ಲಿ) ಏನು ಅದು ಬಾಲಿ ದ್ವೀಪದ ಹೈಸ್ಕೂಲ್ ಹುಡುಗೀರು...

ಅವಳು: ಅಯ್ಯೊ! ಏನು ಗದ್ದಾ! ಎಂಥಾ ಶಬ್ದ ಮಾಲಿನ್ಯ ಬರ್ತಾ ಇದೇರಿ. ಬಾಲಿ ದ್ವೀಪದ ಕಥೆ ಆಮೇಲೆ ಕೇಳೋಣ. ಈಗ ಆಚೆ ಹೋಗೋಣ...

ಅವಳು: (ಸದ್ದು ಕಡಿಮೆಯಾದ ಮೇಲೆ) ಅಂದಹಾಗೆ, ಗಾಂಧೀಜಿ ಈ ಯಂತ್ರಗಳ ಬಗ್ಗೆ ಕೂಡ ಅದೇನೋ ಹೇಳಿದ್ರು ಅಲ್ಲವಾ? ಅವರಿಗೆ ಯಂತ್ರಗಳನ್ನು ಕಂಡರೆ ಆಗ್ತಾ ಇರಲಿಲ್ಲ ಅನ್ನೋದನ್ನ ಕೇಳಿದ್ದೆ... ಸರೀನಾ?

ಅವನು: ತಪ್ಪು ತಪ್ಪು! ಅವರಿಗೆ ಯಂತ್ರಗಳ ಮೇಲೆ ಕೋಪ ಇರಲಿಲ್ಲ. 'ಮನುಷ್ಯನನ್ನು ಗುಲಾಮರನ್ನಾಗಿ ಮಾಡುವ ಯಂತ್ರಗಳು ಬೇಡ' ಅಂದಿದ್ದರು. 'ಮನುಷ್ಯನ ತುತ್ತನ್ನು ಕಸಿದುಕೊಳ್ಳುವ ಯಂತ್ರಗಳು ಬೇಡ; ನಿರುದ್ಯೋಗ ಸೃಷ್ಟಿ ಮಾಡುವ ಯಂತ್ರಗಳು ಬೇಡ' ಅಂದಿದ್ದರು. ಈಗ ಏನ್ ಆಗ್ತಾ ಇದೆ ಗೊತ್ತಾ? ಕೆರೆಗಳ ಹೂಳು ಎತ್ತೋಕೆ, ಹಳ್ಳಿಗಳಿಗೆ ರಸ್ತೆ ಮಾಡೋಕೆ, ಕಾಲುವೆ ಮಾಡೋಕೆ ಅವರದೇ ಹೆಸರಿನಲ್ಲಿ – ಅಂದ್ರೆ 'ಮಹಾತ್ಮಾ ಗಾಂಧೀ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ'ಯಲ್ಲಿ ಜೆಸಿಬಿಗಳು, ಬುಲ್‌ಡೋಜರ್‌ಗಳು ಕೆಲಸ ಮಾಡ್ತಾ ಇವೆ. ಬಡವರ ತುತ್ತನ್ನು ಅವು ಕಸೀತಾ ಇವೆ.

(ಫ್ಯಾಕ್ಟರಿಯ ಯಂತ್ರದ ಗದ್ದಲ ಜಾಸ್ತಿಯಾಗುತ್ತದೆ)

ಮಗು: ಶಬ್ದ ಮಾಲಿನ್ಯ...!